ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 12/02/2021ರಂದು 5.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಚಿತವಾಗಿರುವ ತಾಂತ್ರಿಕ ಮೌಲ್ಯಮಾಪನ ಸಮಿತಿಯ ಮುಂದೆ ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ ನಡೆದ ಸಮಿತಿ ಸಭೆಯ ನಡವಳಿಗಳು.

ಹಾಜರಿದ್ದ ಅಧಿಕಾರಿಗಳು:

1.	ಶ್ರೀ ಗೌರವ್ ಗುಪ್ತ, ಭಾ.ಆ.ಸೇ, ಮುಖ್ಯ ಆಯುಕ್ತರು	: ಅಧ್ಯಕ್ಷರು
2.	ಶ್ರೀ ಮನೋಜ್ ಜೈನ್, ಭಾ.ಆ.ಸೇ, ವಿಶೇಷ ಆಯುಕ್ತರು(ಯೋಜನೆ)	: ಉಪಾಧ್ಯಕ್ಷರು
3.	ಶ್ರೀಮತಿ ತುಳಸಿ ಮದ್ದಿನೇನಿ, ಭಾ.ಆ.ಸೇ, ವಿಶೇಷ ಆಯುಕ್ತರು (ಹಣಕಾಸು)	: ಸದಸ್ಯರು
4.	ಶ್ರೀ ಕೆ. ಹರೀಶ್ ಕುಮಾರ್, ಭಾ.ಆ.ಸೇ, ವಿಶೇಷ ಆಯುಕ್ತರು(ಘನತ್ಯಾಜ್ಯ)	: ಸದಸ್ಯರು
5.	ಶ್ರೀ ರೆಡ್ಡಿ ಶಂಕರ್ ಬಾಬು, ಐ.ಡಿ.ಇ.ಎಸ್, ವಲಯ ಆಯುಕ್ತರು(ರಾರಾನಗರ)	: ಸದಸ್ಯರು
6.	ಶ್ರೀ ಎಸ್.ಪ್ರಭಾಕರ್, ಪ್ರಧಾನ ಅಭಿಯಂತರರು	: ಸದಸ್ಯರು
7.	ಶ್ರೀ ರಾಜು.ಎಸ್.ಕೆ, ಮುಖ್ಯ ಲೆಕ್ಕಾಧಿಕಾರಿಗಳು	: ಸದಸ್ಯರು
8.	ಶ್ರೀ ವಿಜಯ್ ಕುಮಾರ್ ಎನ್, ಮುಖ್ಯ ಅಭಿಯಂತರರು (ರಾರಾನಗರ ವಲಯ)	: ಸದಸ್ಯ ಕಾರ್ಯದರ್ಶಿ

ಸಭೆಗೆ ಹಾಜರಿದ್ದ ಇತರೆ ಅಧಿಕಾರಿಗಳು

ಶ್ರೀ ಬಸವರಾಜು ಎನ್, ಕಾರ್ಯಪಾಲಕ ಅಭಿಯಂತರರು, ರಾರಾನಗರ ವಿಭಾಗ

ಪಾಲಿಕೆ ವ್ಯಾಪ್ತಿಯಲ್ಲಿ ಘನ ಸರ್ಕಾರದ 2018-19ನೇ ಸಾಲಿನ "ಮುಖ್ಯಮಂತ್ರಿಗಳ ನವ ಬೆಂಗಳೂರು" ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿರುವ ರೂ. 2500.00 ಕೋಟಿಗಳ ಜೊತೆಯಲ್ಲಿ ರೂ. 5515.37 ಕೋಟಿಗಳ ಹೆಚ್ಚುವರಿ ಅನುದಾನ ಸೇರಿದಂತೆ ಒಟ್ಟು ರೂ. 8015.37 ಕೋಟಿಗಳ ಮೊತ್ತದ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾಯೋಜನೆಗೆ ಕೆಲವೊಂದು ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿರುತ್ತದೆ.

ಮುಂದುವರೆದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ಪೈ 2018, ದಿನಾಂಕ: 01.02.2019 ರಂತೆ ಅನುಮೋದಿಸಿದ್ದ "ಮುಖ್ಯಮಂತ್ರಿಗಳ ನವ ಬೆಂಗಳೂರು" ಯೋಜನೆಯನ್ನು ರದ್ದುಪಡಿಸಿ ಪರ್ಯಾಯವಾಗಿ ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ಪೈ 2018, ದಿನಾಂಕ: 20.09.2019 ರಂತೆ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯಡಿ ಅನುಬಂಧ-2 ರ ಕ್ರಮ ಸಂಖ್ಯೆ: 754 ರಲ್ಲಿ ಕಾಮಗಾರಿಯು ಅನುಮೋದನೆಗೊಂಡಿರುತ್ತದೆ.

ಈ ಮೇರೆಗೆ ಮುಖ್ಯ ಅಭಿಯಂತರರು, (ರಾ.ರಾ.ನ.) ವಲಯ ರವರು ಯೋಜನೆಯ ಕಾಮಗಾರಿ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು, (ರಾ.ರಾ.ನಗರ) ರವರು ನೀಡಿರುವ ತಾಂತ್ರಿಕ ವರದಿಯನ್ನು ಕ್ರೋಢೀಕರಿಸಿ ಮೌಲ್ಯಮಾಪನಕ್ಕೆ ವಿಷಯ ಪಟ್ಟಿಯನ್ನು ತಯಾರಿಸಿ ಟೆಂಡರ್ ಮೌಲ್ಯಮಾಪನ ಸಮಿತಿ ಮುಂದೆ ತಾಂತ್ರಿಕ ಅನುಮೋದನೆಗೆ ಮಂಡಿಸಿರುತ್ತಾರೆ.

ಈ ವಿಷಯವಾಗಿ ಟೆಂಡರ್ ಮೌಲ್ಯಮಾಪನ ಸಮಿತಿಯು ಮೌಲ್ಯಮಾಪನಕ್ಕೆ ವಿಷಯ ಪಟ್ಟಿಯ ಯೋಜನೆಯ ತಾಂತ್ರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಟೆಂಡರ್ ಮೌಲ್ಯಮಾಪನ ಸಮಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ 2000ರಂತೆ ಹಾಗೂ ಇತ್ತೀಚೆಗೆ ಹೊರಡಿಸಿದ ಸರ್ಕಾರಿ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

1. ಗುತ್ತಿಗೆದಾರರ ವಾರ್ಷಿಕ ವಹಿವಾಟಿನ ಮೌಲ್ಯವನ್ನು Standard tender document KW-4 clause -3.2 (a) ಗೆ ಅನ್ವಯ ಟೆಂಡರ್ ಆಹ್ವಾನಿಸಿರುವ ಸಾಲಿಗೆ ಸಮೀಕರಿಸುವ ಸಲುವಾಗಿ ವಾರ್ಷಿಕ 10% Weight age ನೀಡಲಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: No.FD 480 Exp-12/2014, Bangalore date: 19-07-2014 Standard tender document KW-4 clause -3.2 (b) ಗೆ ಸಂಬಂಧಿಸಿದಂತೆ ಸಮಾನ ರೂಪದ ಕಾಮಗಾರಿಯ ಮೊತ್ತ ಟೆಂಡರ್‌ಗಿಟ್ಟ ಮೊತ್ತದ ಶೇ.೫೦ ರಷ್ಟು ಎಂದು ಪರಿಗಣಿಸಲಾಗಿದೆ.
3. Standard tender document clause -15.2 ಮತ್ತು 3.2 (c) ಪರಿಗಣಿಸಲಾಗಿದೆ.

ವಿಷಯ ಸಂಖ್ಯೆ: 01

ಅನುಮೋದನೆಗೊಂಡಿರುವ ಕಾಮಗಾರಿಯ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯ ಮುಖ್ಯಾಂಶಗಳು ಈ ಕೆಳಕಂಡಂತಿವೆ

SL No	Name of Work	Est. Cost (Rs. In Lakhs)
1	Redesign and Upgrading of existing Musicle Fountain interfaced with multimedia based laser and video projection on Aqua Screen at J.P.Park ward no 17 under PACKAGE-2019-20 RRN-DIV-(08)	1000.00

Indent No	BBMP/2021-22/OW/WORK_INDENT47783
ಕಾಮಗಾರಿ ಸಂಕೇತ	017-20-000006
ಅಂದಾಜು ಮೊತ್ತ	1000.00 ಲಕ್ಷಗಳು
ಅಳವಡಿಸಿದ ದರ ಪಟ್ಟಿ	2018-19 ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಚಾಲ್ತಿ ದರಪಟ್ಟಿ ಹಾಗೂ ಕೊಟೇಷನ್ ದರಗಳು
ಆಡಳಿತಾತ್ಮಕ ಅನುಮೋದನೆ	ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ
ತಾಂತ್ರಿಕ ಮಂಜೂರಾತಿ	ಮು.ಅ/ರಾ.ರಾ.ನ./ಟಿ.ಎಸ್/21/2020-21 ದಿನಾಂಕ: 24.06.2021
ಟೆಂಡರ್‌ಗಿಟ್ಟ ಮೊತ್ತ ರೂ	836.09 ಲಕ್ಷಗಳು
ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	RRND/EE/Tend/03/2021-22 Date: 29.06.2021
ಪ್ರಕಟಣೆಯಾದ ದಿನ ಪತ್ರಿಕೆ	ವಿಜಯಕರ್ನಾಟಕ ಹಾಗೂ ದಿ ಹಿಂದೂ ದಿನಾಂಕ: 01.07.2021
ಟೆಂಡರ್ ಕರೆ	1ನೇ ಕರೆ.
ಟೆಂಡರ್‌ಗೆ ಅರ್ಜಿ ಸಲ್ಲಿಸಿದ ಬಿಡ್ಡುದಾರರು	ಮೂರು (03)
ಟೆಂಡರ್ ಪದ್ಧತಿ	ಟ್ವಿ ಲಕೋಟೆ ಪದ್ಧತಿ
ಉಪಯೋಗಿಸಿದ Standard Bid Document	KTTP Standard Bid Document KW-04

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 26.07.2021 ರಂದು ತೆರೆಯಲಾಗಿದ್ದು ಈ ಕೆಳಕಂಡ ಇಬ್ಬರು ಬಿಡ್ಡುದಾರರು ಭಾಗವಹಿಸಿರುತ್ತಾರೆ.

1) ಶ್ರೀ ರಾಜೇಶ್.ಎಂ (ಶ್ರೀ ನಂಜುಂಡೇಶ್ವರ ಕನ್‌ಸ್ಟ್ರಕ್ಷನ್)
2) ಶ್ರೀ ದಾಮೋದರ್ ಮಂಜುನಾಥ್ (ಮೆ// ದಾಮೋದರ್& ಕೋ)
3) ಶ್ರೀ ಪುರುಷೋತ್ತಮ್ ರಾಜು.ಎನ್ (ನಾದಿಂಪಲ್ಲಿ ಪುರುಷೋತ್ತಮ್ ರಾಜು, ಎನ್.ಪಿ.ಆರ್.ಇನ್‌ಫ್ರಾಬೆಕ್)

ಸದರಿ ಯೋಜನೆಯ ಟೆಂಡರ್‌ನಲ್ಲಿ ಮೂರು ಜನ ಬಿಡ್ಡುದಾರರು ಭಾಗವಹಿಸಿದ್ದು ಅದರಲ್ಲಿ ಮೂರು ಜನ ಬಿಡ್ಡುದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆಂದು ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ ವಲಯ) ರವರು ಶಿಫಾರಸ್ಸು ಮಾಡಿರುತ್ತಾರೆ.

ನಿರ್ಣಯ: ಸದರಿ ಯೋಜನೆಯ ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್ಡುದಾರರ ಪೈಕಿ 1)ಶ್ರೀ.ರಾಜೇಶ್.ಎಂ (ಶ್ರೀ ನಂಜುಂಡೇಶ್ವರ ಕನ್‌ಸ್ಟ್ರಕ್ಷನ್) 2)ಶ್ರೀ.ದಾಮೋದರ್ ಮಂಜುನಾಥ್ (ಮೆ// ದಾಮೋದರ್& ಕೋ) ಹಾಗೂ 3)ಶ್ರೀ.ಪುರುಷೋತ್ತಮ್ ರಾಜು.ಎನ್(ನಾದಿಂಪಲ್ಲಿ ಪುರುಷೋತ್ತಮ್ ರಾಜು, ಎನ್.ಪಿ.ಆರ್. ಇನ್‌ಫ್ರಾಟೆಕ್) ಬಿಡ್ಡುದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ ಎಂದು ಸಭೆಯು ನಿರ್ಣಯಿಸಿರುತ್ತದೆ. ಸದರಿ ಬಿಡ್ಡುದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿ ಟೆಂಡರ್ ತಾಂತ್ರಿಕ ಷರತ್ತುಗಳಿಗೆ ಅನುಗುಣವಾಗಿ ಮೌಲ್ಯಮಾಪನ ಮಾಡಲಾಗಿದ್ದು, ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್‌ನ್ನು ತೆರೆಯಲು ಸರ್ವಾನುಮತದಿಂದ ತಿರ್ಮಾನಿಸಲಾಯಿತು.

ಮುಖ್ಯ ಅಭಿಯಂತರರು (ರಾ.ರಾ.ನ. ವಲಯ)
ಬಿ.ಬಿ.ಎಂ.ಪಿ
(ಸದಸ್ಯ ಕಾರ್ಯದರ್ಶಿ)

ಮುಖ್ಯ ಲೆಕ್ಕಾಧಿಕಾರಿಗಳು
ಬಿ.ಬಿ.ಎಂ.ಪಿ (ಸದಸ್ಯರು)

ಪ್ರಧಾನ ಅಭಿಯಂತರರು
ಬಿ.ಬಿ.ಎಂ.ಪಿ (ಸದಸ್ಯರು)

ವಲಯ ಆಯುಕ್ತರು (ರಾ.ರಾ.ನಗರ)
ಬಿ.ಬಿ.ಎಂ.ಪಿ (ಸದಸ್ಯರು)

ವಿಶೇಷ ಆಯುಕ್ತರು (ಹಣಕಾಸು)
ಬಿ.ಬಿ.ಎಂ.ಪಿ (ಸದಸ್ಯರು)

ವಿಶೇಷ ಆಯುಕ್ತರು (ಯೋಜನೆ)
ಬಿ.ಬಿ.ಎಂ.ಪಿ (ಉಪಾಧ್ಯಕ್ಷರು)

ಮಾನ್ಯ ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
(ಅಧ್ಯಕ್ಷರು)
CHIEF COMMISSIONER
BRUHAT BENGALURU MAHANAGAR PALIKE